


## ಗ್ಲೋಬಲ್ ವಿಲೇಜ್!

**ಟೈ**ಟಾನಿಕ್ ಸಿನಿಮಾ ನೋಡಿ ಅದರ ಗಾತ್ರ, ವೈಯಾರ ಕಣ್ತುಂಬಿಕೊಂಡಿದ್ದ ನನ್ನಂಥವರಿಗೆ 'ಫ್ರೀಡಂ ಆಫ್ ದ ಸೀಸ್' ಹಡಗು ತೇಲುವ ಅಮರಾವತಿಯಂತೆ ಕಂಡಿದ್ದರಲ್ಲಿ ಯಾವ ಅಚ್ಚರಿಯೂ ಇಲ್ಲ. ೨೦೦೬ರಲ್ಲಿ ಚೊಚ್ಚಲ ಪ್ರಯಾಣ ಆರಂಭಿಸಿದ ಹಡಗದು. ೧,೧೨೪ ಅಡಿ ಉದ್ದದ ಈ ಐಶಾರಾಮಿ ಹಡಗು, ನೀರಿನ ಮೇಲ್ಮೈನಲ್ಲಿ ೨೦೯ ಅಡಿಯಷ್ಟು ಎತ್ತರವಿದೆ. ೧೮ ಮಹಡಿಗಳಲ್ಲಿ ೧೫ ಮಹಡಿಗಳು ಪ್ರಯಾಣಿಕರಿಗೆ ಮೀಸಲು. ಒಳಗೆ ಕಾಲಿಟ್ಟರೆ ಇಂದ್ರನ ಅಮರಾವತಿಯಂತೆಯೇ ಭಾಸವಾಗುತ್ತದೆ. ಇದರಲ್ಲಿ ಎಲ್ಲವೂ ಲಭ್ಯ.

೪,೬೦೦ ಪ್ರಯಾಣಿಕರು ಮತ್ತು ೧,೩೦೦ ಸಿಬ್ಬಂದಿಯನ್ನು ಏಕಕಾಲಕ್ಕೆ ಹೊತ್ತೊಯ್ಯುವ ಸಾಮರ್ಥ್ಯ ಇದಕ್ಕಿದೆ. ಹಡಗಿನ ಮೇಲಿನ ಮಹಡಿಯಲ್ಲಿ ರಾಕ್ ಕ್ಲೈಂಬಿಂಗ್, ಬಾಸ್ಕೆಟ್‌ಬಾಲ್ ಕೋರ್ಟ್, ವಾಲಿಬಾಲ್ ಮೈದಾನ, ಸರ್ಫಿಂಗ್, ರನ್ನಿಂಗ್ ಟ್ರ್ಯಾಕ್, ಮಿನಿ ಗಾಲ್ಫ್ ಮೈದಾನವೂ ಇದೆ. ಉಳಿದಂತೆ ೧೩ನೇ ಮಹಡಿಯ ಒಂದು ಭಾಗದಲ್ಲಿ ವಯಸ್ಕರಿಗಾಗಿ ಈಜುಕೊಳವಿದ್ದರೆ, ಮತ್ತೊಂದು ಅಂಚಿನಲ್ಲಿ ಮಕ್ಕಳಿಗಾಗಿ ಈಜಲು ವ್ಯವಸ್ಥೆ ಮಾಡಲಾಗಿತ್ತು. ಒಳಾಂಗಣ ಹಾಗೂ ಹೊರಾಂಗಣ ಜಿಮ್, ಸ್ಪಾ, ಸಿನಿಮಾ ಮಂದಿರ, ಪಿಜ್ಜಾ ಮಳಿಗೆ, ಬೇಕಾದ ಸಮಯಕ್ಕೆ ತಕ್ಕಂತೆ ಪ್ರಯಾಣಿಕರ ಅಗತ್ಯವನ್ನು ಪೂರೈಸುವ ಅತ್ಯಾಧುನಿಕ ರೆಸ್ಟೋರೆಂಟ್‌ಗಳು!

ಜಗತ್ತಿನ ಎಲ್ಲ ದೇಶಗಳ, ಭಿನ್ನ ಅಭಿರುಚಿಯ ವಿವಿಧ ವಯೋಮಾನದವರನ್ನು ಭೇಟಿಯಾಗಬೇಕೆಂದರೆ ಹಡಗಿನ ಪ್ರವಾಸವೇ ಒಳ್ಳೆಯದು. ನಾವಿದ್ದ ಹಡಗಿನಲ್ಲಿ ೧೫ ದಿನದ ಮಗುವಿನಿಂದ ಹಿಡಿದು, ೮೦ ವರ್ಷದ ವಯೋವೃದ್ಧರೂ ಇದ್ದರು. ಹಡಗಿನಲ್ಲೇ ಮದುವೆಯಾದ ೫೯ ವರ್ಷದ ಜೋಡಿಯೊಂದು ವಿಶೇಷವಾಗಿ ಗಮನ ಸೆಳೆದರೆ, ಆಗಷ್ಟೇ ಮದುವೆಯಾದ ಜೋಡಿಗಳೇ ಅರ್ಧದಷ್ಟಿದ್ದರು. ಆ ದೈತ್ಯ ಹಡಗು ನಿಜಕ್ಕೂ ಒಂದು ಮಿನಿಜಗತ್ತಿನಂತೆಯೇ ಇತ್ತು. ದೇಶ ಭಾಷೆಗಳ ಗಡಿಗಳ ಹಂಗಿಲ್ಲದ 'ಗ್ಲೋಬಲ್ ವಿಲೇಜ್'ನಂತೆ ಕಾಣಿಸುತ್ತಿತ್ತು.

ಹಡಗಿನಲ್ಲಿ ಸಿಕ್ಕ ಒಂದು ಕುಟುಂಬದ ನಿತ್ಯದ ಚಟುವಟಿಕೆ ನಮಗೆ ಅಚ್ಚರಿ ಮೂಡಿಸಿತು. ಬೆಳಗ್ಗೆ ಎದ್ದ ತಕ್ಷಣ ಗಂಡ– ಹೆಂಡತಿ ಇಬ್ಬರೂ ಬೇರ್ಪಟ್ಟು, ದಿನಪೂರ್ತಿ ಹಡಗಿನಲ್ಲಿ ಪ್ರತ್ಯೇಕವಾಗಿ ವಿಹರಿಸುತ್ತಿದ್ದರು. ತನಗಿಷ್ಟ ಬಂದಂತೆ ಚಟುವಟಿಕೆಯಲ್ಲಿ ತೊಡಗಿಕೊಳ್ಳುತ್ತಿದ್ದರು. ರಾತ್ರಿ ವೇಳೆ ಊಟಕ್ಕೆ ಒಂದೆಡೆ ಕೂತು ಇಡೀ ದಿನ ನಡೆಸಿದ ಸಾಹಸಯಾತ್ರೆಗಳು, ವಿವಿಧ ಕಸರತ್ತುಗಳನ್ನು ನೆನಪಿಸಿಕೊಳ್ಳುತ್ತಿದ್ದರು!

ರಾಯಲ್ ಕೆರಿಬಿಯನ್ 'ಫ್ರೀಡಂ ಆಫ್ ದ ಸೀಸ್' ನಮ್ಮನ್ನು ಸ್ವಾಗತಿಸಲು ಕಾದುನಿಂತಿತ್ತು.

'ಚೆಕ್ ಇನ್' ಮಾಡಿ, ಪಾಸ್‌ಪೋರ್ಟ್, ಕ್ರೆಡಿಟ್ ಕಾರ್ಡ್ ಕೊಟ್ಟ ಮೇಲೆ ಹಡಗಿನ ಒಳಗಡೆ ಸುತ್ತಾಡಲು ಅನುಕೂಲವಾಗುವಂತಹ 'ಸೀ ಪಾಸ್' ಕೊಟ್ಟರು. ಪಾಸ್ ಕೊಡುವ ಮೂಲ ಉದ್ದೇಶ– ನಾವು ತಂಗುವ ಪ್ರತಿಯೊಂದು ಕೊಠಡಿಗೆ ಅನುಗುಣವಾಗಿ ಒಂದು ಖಾತೆ ತೆರೆಯುವುದು. ಸೀದಾ ನಮ್ಮ ಕೊಠಡಿಗೆ ತೆರಳಿ, ಎಲ್ಲ ವಸ್ತುಗಳನ್ನು ಅಲ್ಲಿಟ್ಟೆವು. ನನಗೆ ಹಾಗೂ ನನ್ನ ಪತಿಗೆ ಅನುಕೂಲವಾಗುವಂತಹ ಹಾಸಿಗೆ ವ್ಯವಸ್ಥೆ, ಎರಡು ಕುರ್ಚಿ, ಟೀಪಾಯಿ ಮತ್ತು ಫ್ರಿಜ್ ವ್ಯವಸ್ಥೆಯಿತ್ತು. ಕೊಠಡಿಯಲ್ಲೇ ಸ್ನಾನ ಹಾಗೂ ಶೌಚಗೃಹದ ವ್ಯವಸ್ಥೆಯಿತ್ತು. ಒಳಗಿರುವ ಆಟೋಟಗಳು ಉಚಿತವಿದ್ದರೆ, ಆಲ್ಕೋಹಾಲು, ಬಾಟಲಿ ನೀರಿಗೆ ಪ್ರತ್ಯೇಕವಾಗಿ ಹಣ ನೀಡಬೇಕಿತ್ತು.

ರೂಮ್‌ಗೆ ಹೋಗಿ ಸುಧಾರಿಸುವಷ್ಟರಲ್ಲಿ ನಮಗೆ ಕರೆ ಬಂತು. ಅಲ್ಲಿ ಹೋದರೆ 'ಸೇಫ್ಟಿ ಡ್ರಿಲ್' ಮಾಡಿಸಿದರು. ತುರ್ತು ಪರಿಸ್ಥಿತಿ ವೇಳೆ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು ಹಾಗೂ ಕರ್ತವ್ಯಗಳ ಬಗ್ಗೆ ತಿಳಿಸಿಕೊಟ್ಟರು. ಇದು ಎಲ್ಲರಿಗೂ ಕಡ್ಡಾಯ. ಪಡುವಣದಲ್ಲಿ ಸೂರ್ಯ ಅಸ್ತಮಿಸುತ್ತಿದ್ದರೆ, ನಮ್ಮ ಹಡಗು ನಿಧಾನವಾಗಿ ಚಲಿಸಲು